318 ಶ್ರೀ ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)
ಮಾನ್ಯ ಕಂದಾಯ ಸಚಿವರು

ಅ) ಗುಲ್ಬರ್ಗಾ ಜಿಲ್ಲೆ ಚಿಂಚೋಳಿ, ಸೇಡಂ, ಚಿತ್ತಾಪುರ ತಾಲ್ಲೂಕುಗಳಲ್ಲಿ ಭೂ ಸುಧಾರಣೆ ಕಾಯ್ದೆ ಕಲಂ 109ರ ಅಡಿಯಲ್ಲಿ ಭೂಮಿ ಖರೀದಿಗಾಗಿ ಬಂದಿರುವ ಪ್ರಸ್ತಾವನೆಗಳೆಷ್ಟು (ಅವುಗಳ ವಿವರ ನೀಡುವುದು).

ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಎರಡು ಚಿತ್ತಾಪುರ ತಾಲ್ಲೂಕಿನಲ್ಲಿ ನಾಲ್ಕು ಪ್ರಸ್ತಾವನೆಗಳು ಬಂದಿವೆ. ಸೇಡಂ ತಾಲ್ಲೂಕಿನಲ್ಲಿ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. ಅವುಗಳ ವಿವರ ಈ ಕೆಳಗಿನಂತಿದೆ.

1. ಮೆ: ಸಾಗರ ಸಿಮೆಂಟ್ಸ್ ಲಿಮಿಟೆಡ್ ಹೈದ್ರಾಬಾದ್. ಇವರಿಗೆ ಸಿಮೆಂಟ್ ಉತ್ಪಾದನಾ ಘಟಕ ಸ್ಥಾಪಿಸಲು.
2. ಮೆ: ಚೆಟ್ಟಿನಾಡ್ ಸಿಮೆಂಟ್ಸ್ ಕಾರ್ಪೋರೆಷನ್ ಲಿಮಿಟೆಡ್ ಚೆನ್ನೈ, ಇವರಿಗೆ ಸಿಮೆಂಟ್ ಉತ್ಪಾದನಾ ಘಟಕ ಸ್ಥಾಪಿಸಲು.
3. ಮೆ:ಮುರಳಿ ಇಂಡಸ್ಟ್ರೀಸ್ ಲಿಮಿಟೆಡ್ ನಾಗಪುರ, ಮಹಾರಾಷ್ಟ್ರ, ಇವರಿಗೆ ಸಿಮೆಂಟ್ ಉತ್ಪಾದನಾ ಘಟಕ ಸ್ಥಾಪಿಸಲು.
4. ಮೆ: ಇಟ್ಟಿನ ಸಿಮೆಂಟ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು, ಇವರಿಗೆ ಸಿಮೆಂಟ್ ಉತ್ಪಾದನಾ ಘಟಕ ಸ್ಥಾಪಿಸಲು.
5. ಮೆ: ರಾಜಶ್ರೀ ಸಿಮೆಂಟ್ಸ್ ಕಂಪನಿ (ಗ್ರಾಸೀಂ) ಮಳಖೇಡ ಇವರಿಗೆ ಸಿಮೆಂಟ್ ಉತ್ಪಾದನಾ ಘಟಕ ಸ್ಥಾಪಿಸಲು.
6. ಮೆ: ಓರಿಯೆಂಟ್ಸ್ ಸಿಮೆಂಟ್ಸ್ ಅಂಡ್ ಪೇಪರ್ ಇಂಡಸ್ಟ್ರೀಸ್ ಲಿಮಿಟೆಡ್, ಹೈದ್ರಾಬಾದ್ ಇವರಿಗೆ ಸಿಮೆಂಟ್ ಉತ್ಪಾದನಾ ಘಟಕ ಸ್ಥಾಪಿಸಲು.

ಆ) ಮಂಜೂರು ಆಗದೆ ಇರುವ ಪ್ರಸ್ತಾವನೆಗಳು ಯಾವುವು? (ವಿವರ ನೀಡುವುದು?)

(1) ರಾಜಶ್ರೀ ಸಿಮೆಂಟ್ಸ್ ಕಂಪನಿ (ಗ್ರಾಸೀಂ) ಮಳಖೇಡ, ಸೇಡಂ ತಾಲ್ಲೂಕು, ಗುಲ್ಬರ್ಗ.

(2) ಮೆ: ಓರಿಯೆಂಟ್ ಸಿಮೆಂಟ್ಸ್ ಅಂಡ್ ಪೇಪರ್ ಇಂಡಸ್ಟ್ರೀಸ್ ಹೈದ್ರಾಬಾದ್.

ಇ) ಮಂಜೂರು ಮಾಡದೆ ಇರುವುದಕ್ಕೆ ಕಾರಣಗಳೇನು?

ಅಪೂರ್ಣ ಮಾಹಿತಿ ಬಂದಿರುವುದರಿಂದ ಮಂಜೂರು ಮಾಡಿರುವುದಿಲ್ಲ.

ಈ) ಯಾವಾಗ ಮಂಜೂರು ಮಾಡಲಾಗುವುದು.

ಮಾಹಿತಿ ಬಂದ ನಂತರ ಮಂಜೂರು ಮಾಡಲಾಗುವುದು.